**ಗೆಳೆಯ:** ಮನುಷ್ಯನೊಬ್ಬನೇ ನಗುವ ಪ್ರಾಣಿ.
**ಗುಂಡ:** ನಿಜ. ಮನುಷ್ಯನೊಬ್ಬನೇ ನಗೆಗೀಡಾಗುವ ಪ್ರಾಣಿಯೂ.

***

**ಗುಂಡ:** ಹೋದ ತಿಂಗಳು ನೀನು ನನಗೆ ನೂರು ರೂಪಾಯಿ ಸಾಲ ಕೊಟ್ಟಿದ್ದೆಯಲ್ಲ. ತಗೊ.
**ಗೆಳೆಯ:** ಅರೆ ಹೌದಾ? ನಾನು ಮರೆತೇಬಿಟ್ಟಿದ್ದೆ.
**ಗುಂಡ:** ಅಯ್ಯೋ ಮೂರ್ಖ! ಇದನ್ನು ನನಗೆ ಮೊದಲೇ ಹೇಳಬಾರದಿತ್ತೆ!

***

**ಗುಂಡ (ವಿಮಾನದಲ್ಲಿ):** ಇಂಥ ವಿಮಾನ ಎಷ್ಟು ಸಾರಿ ಅಪಘಾತಕ್ಕೀಡಾಗಬಹುದು?
**ಗಗನಸಖಿ:** ಅಕಸ್ಮಾತ್ ಆದರೆ ಒಂದೇ ಒಂದು ಸಲ.

***

**ಹೆಂಡತಿ:** ಏನ್ರೀ... ನಿಮ್ಮ ದೇಹ ಕಲ್ಲು ಇದ್ದ ಹಾಗಿದೆ?
**ಗುಂಡ:** ಮತ್ತಿನ್ನೇನು ಅಂದುಕೊಂಡೆ? ಅಕ್ಕಿಯಲ್ಲಿ ಕಲ್ಲನ್ನು ಆರಿಸದೆ ಹಾಗೇ ಅನ್ನ ಮಾಡಿ ಹಾಕ್ತೀಯಲ್ಲ. ಅದನ್ನು ತಿಂದು ನನ್ನ ದೇಹ ಕಲ್ಲಿನ ಹಾಗೇ ಆಗಿದೆ.

***

**ಗುಂಡ:** ನಿನ್ನೆ ಹೊಸ ಮೊಬೈಲ್ ತೆಗೆದುಕೊಂಡೆ ಕಣೇ.
**ಹೆಂಡತಿ:** ಮತ್ತೆ ಪಾರ್ಟಿ ಕೊಡಿಸೋದಿಲ್ವಾ?
**ಗುಂಡ:** ಕೊಡಿಸಬೇಕಂತ ನನಗೂ ಆಸೆ. ಆದರೆ ದುಡ್ಡೇ ಇಲ್ವಲ್ಲ?
**ಹೆಂಡತಿ:** ಅದಕ್ಯಾಕೆ ಚಿಂತೆ? ಮೊಬೈಲ್ ಮಾರಿದ್ರೆ ಆಯ್ತಪ್ಪ!

***

**ಹೆಂಡತಿ:** ರೀ... ನಾನು ಯಾವಾಗಲೂ ನಿಮ್ಮ ಹೃದಯದಲ್ಲೇ ಇರಬೇಕೆಂದು ಆಸೆ.
**ಗುಂಡ:** ಆಯ್ತು ಇರು ನಾನು ಬೇಡವೆನ್ನುವುದಿಲ್ಲ. ಆದರೆ ಅಲ್ಲಿರುವ ಇತರೆ ಹೆಂಗಸರೊಡನೆ ಜಗಳ ಆಡಬಾರದು ಅಷ್ಟೆ!

***

**ಹೆಂಡತಿ:** ನಾನು ಹೆಂಡತಿ ಎಂಬ ಕೆಲಸಕ್ಕೆ ರಾಜೀನಾಮೆ ನೀಡುತ್ತಿದ್ದೇನೆ.
**ಗುಂಡ:** ಆಯ್ತು ನಿನ್ನ ರಾಜೀನಾಮೆಯನ್ನು ಅಂಗೀಕರಿಸಿದ್ದೇನೆ. ಆದರೆ, ಮತ್ತೊಬ್ಬಳು ಬರುವವರೆಗೆ ನೀನು ಕೆಲಸ ಮಾಡುತ್ತಿರಬೇಕು.

***

**ಹೆಂಡತಿ:** ರೀ... ಯಾವುದಾದ್ರೂ ಭಯಂಕರ ದೆವ್ವದ ಸಿನಿಮಾ ನೋಡೋಣ್ವಾ?
**ಗುಂಡ:** ಒಕೆ ಒಕೆ. ನಮ್ಮ ಮದುವೆ ಸಿ.ಡಿ. ತೆಗೆದುಕೊಂಡು ಬಾ!

***

**ಹೆಂಡತಿ:** ಸರ್ ನನಗೆ ಮತ್ತೆ ನನ್ನ ಗಂಡ ಬೇಕು.
**ವಕೀಲ:** ಡೈವೋರ್ಸ್ ಆಗಿ ಇನ್ನೂ ಆರು ತಿಂಗಳಾಗಿಲ್ಲ. ಮತ್ತೆ ಗಂಡ ಬೇಕು ಅಂತೀಯಲ್ಲಮ್ಮ, ಯಾಕೆ?
**ಹೆಂಡತಿ:** ಡೈವೋರ್ಸ್ ಆದಾಗಿನಿಂದ ಅವರು ಖುಷಿಪಡುತ್ತಿರುವುದನ್ನು ನನ್ನಿಂದ ನೋಡುವುದಕ್ಕೆ ಆಗ್ತಿಲ್ಲ!










***

**ಗುಂಡ:** ಲೋ ಗೋಪಾಲ ಮದುವೆ ಆಗೋದಿದ್ರೆ ಈಗಲೇ ಆಗಿಬಿಡು.
**ಗೋಪಾಲ:** ಯಾಕೋ?
**ಗುಂಡ:** ಯಾಕಂದ್ರೆ ಈಗ ಕೊರೊನಾ ಸಮಯ. ಎಲ್ಲಾ ಬ್ಯೂಟಿ ಪಾರ್ಲರ್ ಮುಚ್ಚಿರುತ್ತೆ. ನೀನು ಮೋಸ ಹೋಗುವ ಅವಕಾಶ ಇರುವುದಿಲ್ಲ.

***

**ಗುಂಡ:** ಐ ಲವ್ ಯು ರಾಣಿ.
**ರಾಣಿ:** ಐ ಹೇಟ್ ಯು.
**ಗುಂಡ:** ಮಾಣಿ ಇಷ್ಟೊತ್ತು ಇವಳು ತಿಂದಿದ್ದಕ್ಕೆಲ್ಲ ಬಿಲ್ ಇವಳಿಗೆ ಕೊಡು.
**ರಾಣಿ:** ಕೋಪ ಯಾಕೊ ಗುಂಡ. ಸುಮ್ನೆ ತಮಾಷೆಗೆ ಹಾಗಂದೆ!

***

**ಹೆಂಡತಿ:** ರೀ... ಪಕ್ಕದ ಮನೆಯಲ್ಲಿ ಗಂಡ ಹೆಂಡತಿ ಸುಮಾರು ಒಂದು ಗಂಟೆಯಿಂದ ಜಗಳವಾಡುತ್ತಿದ್ದಾರೆ. ಹೋಗಿ ಬಿಡಿಸಬಾರದಾ?
**ಗುಂಡ:** ಸುಮ್ಮನಿರಮ್ಮ, ಬೆಳಿಗ್ಗೆ ಅವರ ಮನೆಗೆ ನಾನು ಹೋಗಿದ್ದಕ್ಕೇನೆ ಇನ್ನೂ ಜಗಳ ನಡೀತಾ ಇದೆ. ಮತ್ತೆ ಏನಾದ್ರೂ ಹೋದ್ರೆ ಅಷ್ಟೇ ಕಥೆ!

***

**ಹೆಂಡತಿ:** ರೀ... ಈಗ ನಾನು ನೆಲದ ಮೇಲೆ ಕವಡೆ ಹಾಕ್ತೀನಿ. 1ರಿಂದ 4ರ ಒಳಗೆ ಬಿದ್ದರೆ ನೀವು ನನ್ನನ್ನು ಶಾಪಿಂಗ್‌ಗೆ ಕರೆದುಕೊಂಡು ಹೋಗಬೇಕು.
**ಗುಂಡ:** ಅಕಸ್ಮಾತ್ 5 ಬಿದ್ದರೆ?
**ಹೆಂಡತಿ:** ಏನ್ರೀ... ಇದುವರೆಗೂ ನೀವು ಚೌಕಾಬಾರ ಆಡೇ ಇಲ್ವಾ? 5 ಬಿದ್ದರೆ ಇನ್ನೊಂದು ಸಲ ಕವಡೆ ಹಾಕಬೇಕು ಅಷ್ಟೆ!

***

**ವೈದ್ಯ:** ಶುಗರ್ ಚೆಕ್ ಮಾಡಿಸಿದ್ರಾ?
**ಗುಂಡ:** ಇಲ್ಲ ಡಾಕ್ಟ್ರೇ. ಹೋಗಿ ತರಲಾ? ನೀವೆ ಚೆಕ್ ಮಾಡ್ತೀರಾ?

***

**ಗುಂಡ:** ನಾನು ಒಂದು ಮನೆ ಕಟ್ಟಿಸಬೇಕಿತ್ತು. ಅದಕ್ಕೆ ಎಷ್ಟು ಹಣ ಬೇಕಾಗಬಹುದು?
**ಕಂಟ್ರ್ಯಾಕ್ಟರ್:** ಎಂಥ ಮನೆ ಬೇಕು? ಕೆಳಗಡೆ ಮನೆಗೆ 30 ಲಕ್ಷ ಆಗುತ್ತದೆ. ಮೇಲಿನದಕ್ಕೆ 10.
ಗುಂಡ: ಹಾಗಾದ್ರೆ ಮೇಲಿನದೇ ಕಟ್ಟಿಕೊಡಿ.

***

ಮೇಷ್ಟ್ರಿಗೆ ಗುಂಡ ಒಂದು ಪ್ರಶ್ನೆ ಕೇಳಿದ.
**ಗುಂಡ:** ಒಂದು ಹುಲಿ ಅರ್ಧ ಗಂಟೆಯಲ್ಲಿ ಒಂದು ಕಟ್ಟು ಹುಲ್ಲನ್ನು ತಿಂದರೆ, ಎರಡು ಗಂಟೆಯಲ್ಲಿ ಎಷ್ಟು ಕಟ್ಟನ್ನು ತಿನ್ನುತ್ತದೆ ಸರ್?
**ಮೇಷ್ಟ್ರು:** ನಾಲ್ಕು ಕಟ್ಟು.
**ಗುಂಡ:** ಅಯ್ಯೋ ತಪ್ಪು ಸರ್!
**ಮೇಷ್ಟ್ರು:** ಹೌದಾ ಅದು ಹೇಗೆ?
**ಗುಂಡ:** ಹುಲಿ ಎಲ್ಲಾದ್ರೂ ಹುಲ್ಲು ತಿನ್ನುತ್ತಾ!

**ಸಂಗ್ರಹ: ಎಂ.ಕೆ. ಮಂಜುನಾಥ್, ಬೆಂಗಳೂರು**